ಅನಿಸುತ್ತಿರಲಿಲ್ಲ. ಇದನ್ನು 'ಜೋಕಾಲಿ ಕೇಳುವಿಕೆ' ಎಂದು ಕರೆಯಬಹುದೇನೋ. 'ದೂರಬೆಟ್ಟದಲ್ಲಿ ಪುಟ್ಟ ಮನೆಯಿರಬೇಕು...' ಎಂದು ಜೋರಾಗಿ ಕೇಳಿದರೆ 'ಅದರ ಸುತ್ತ ಹೂವ ರಾಶಿ ಹಾಕಿರಬೇಕು' ಎಂಬ ಸಾಲು ಹಿಂದೆ ಹಿಂದೆ ಹೋಗಿ ಕಣ್ಮರೆಯಾಗಿ, ಸ್ವಲ್ಪ ಹೊತ್ತು ಇಲ್ಲವೆನಿಸಿ ಮತ್ತೆ ಮೆಲ್ಲಗೆ ಕಣಿವೆಯಾಳದಿಂದ ಎದ್ದು 'ಸೇರಲೆಬೇಕು ಸೇರಿ ಬಾಳಲೆ ಬೇಕು' ಎಂದು ಬರುತ್ತಿತ್ತು. ಮಧ್ಯೆ ಖಾಲಿ ಬಿದ್ದ ಜಾಗ ಖಾಲಿಯಾಗಿರಲು ಅನೇಕ ಸಲ ಅಕ್ಕನೋ, ತಂಗಿಯೋ, ಅತ್ತೆಯೋ ಇನ್ಯಾರೋ ಬಿಡುತ್ತಿರಲಿಲ್ಲ. ಅಂತು ಅದನ್ನ ಹಾಡಿಕೊಂಡು ಇರುತ್ತಿದ್ದರು. ಹಾಗಾಗಿ ಆ ಕೊರತೆ ಕಾಣುತ್ತಿರಲಿಲ್ಲ. ಆಗೆಲ್ಲ ಒಮ್ಮೊಮ್ಮೆ ರೇಡಿಯೊ ನಿಮಿತ್ತವಾಗಿಬಿಡುತ್ತಿತ್ತು. ಅಲ್ಲಿ ಹಾಡು ಶುರುವಾದರೆ ಅದಕ್ಕಿಂತ ಜೋರಾಗಿ ಮನೆಯ ಸದಸ್ಯರು ದನಿ ಸೇರಿಸಿಬಿಡುತ್ತಿದ್ದರು. ಇದು ಹೇಗೆಂದರೆ 'ಕಪ್ಪು ಎರಡನೇ ಮನೆಯಲ್ಲಿ ರೇಡಿಯೊ ಹಾಡುತ್ತಿದ್ದರೆ ಕಪ್ಪು ನಾಕನೇ ಮನೆಯಲ್ಲಿ' ಮನೆಯವರು ಹಾಡಿಕೊಂಡಿರುತ್ತಿದ್ದರು. 'ಕರ್ಮಣ್ಯೇವಾಧಿ ಕಾರಸ್ತೆ'ಯ ಹಾಗೆ. ಹಾಡುವುದು ನಮ್ಮ ಕರ್ತವ್ಯ. ಅದರ ಫಲಾಫಲ ನಮ್ಮದಲ್ಲ ಎಂಬ ಭಾವ ಅವರದು. ಇದೊಂಥರ ಶ್ರುತಿ ಭೇದರಾಹಿತ್ಯ ಜುಗಲ ಬಂದಿ, ತ್ರಿಗಳ ಬಂದಿ ಕೆಲವು ಸಲ ನಾಕಾರು ಬಂದಿಯೂ ಆಗಿರುತ್ತಿತ್ತು. ಇವರೇ ಹಾಡುತ್ತಾರಲ್ಲ, ಇನ್ಯಾಕೆ ರೇಡಿಯೊ ಎಂದು ಆಫ್ ಮಾಡಿಬಿಟ್ಟರೆ ಮುಗಿದು ಹೋಯಿತು, ಜಗಳವೋ ಜಗಳ! ಅಂದರೆ ರೇಡಿಯೊ ಒಂದು ರೀತಿ ಅವರಿಗೆ ಡ್ರಾಮಾ ಸೈಡ್ ವಿಂಗ್‌ನಲ್ಲಿ ನಿಂತು ಮಾತು ಎತ್ತಿಕೊಡುತ್ತಾರಲ್ಲ ಹಾಗೆ. ಭದ್ರಾವತಿ ಸ್ಟೇಷನ್ ಹಾಡು ಮುಗಿದ ಕೂಡಲೇ ಬೆಂಗಳೂರು, ಆಮೇಲೆ ಶ್ರೀಲಂಕಾ , ಅಲ್ಲಿಂದ ಧಾರವಾಡ ತರುವಾಯ ಕಲಬುರ್ಗಿ ಹೀಗೆ ನಾಕೈದು ಸ್ಟೇಷನ್‌ಗಳ ಕಾಯಂ ಕೇಳುಗರಾಗಿ ಬೆಳಗಿನಿಂದ ರಾತ್ರಿಯವರೆಗೂ ಓಡಾಡಿಕೊಂಡು ಇರುತ್ತಿದ್ದೆವು. ಇಲ್ಲಿ ಚಿತ್ರರಂಜಿನಿ, ಸವಿನೆನಪು, ಅಲ್ಲಿ ದರ್ಪಣ, ಇನ್ನೊಂದೆಡೆ ಅಭಿಲಾಷ, ಆಪ್ ಕೀ ಫರ್ಮಾಯಿಶ್, ಬೇಲಾಕಿ ಫೂಲ್, ಬಿನಾಕಾ ಗೀತ್ ಮಾಲಾ, ನಂದನ, ಕೋರಿಕೆ, ಚಿತ್ರಪಟ ಸಂಗೀತ, ಪಂಚರಂಗಿ ಕಾರ್ಯಕ್ರಮ್... ಹೀಗೆ ಒಂದೇ ಎರಡೇ. ಎಲ್ಲಿ ಯಾವ ಹಾಡು ಹಾಕುತ್ತಾರೆ, ಹೊಸ ಹಾಡು ಎಲ್ಲಿ ಬರುತ್ತೆ, ಯಾರ ಆಯ್ಕೆ ಚೆನ್ನಾಗಿರುತ್ತೆ ಎಂದೆಲ್ಲ ಅಭಿಪ್ರಾಯಗಳು ಮತ್ತು 'ಗೊರ ಗೊರ' ಸದ್ದಿನ ಜೊತೆ ಕೇಳಿಕೊಂಡೇ ಬೆಳೆದ ಈ ನಾಡಿನ ನಾಡವರು ನಾವು.

ನಮಗೆ ಚಿತ್ರಗೀತೆಯ ಆಲಿಸುವಿಕೆಯ ಆ ಹಳೆಯ ದಿನಗಳು ಒಂದು ಮಧುರ ನೆನಪು. ಯಾವುದಾದರೂ ಹಾಡನ್ನು ಕಲಿಯಬೇಕು ಎಂದರೆ ರೇಡಿಯೊದಲ್ಲಿ ಅದು ಬಂದಾಗ ಮಾತ್ರ ಬರೆದುಕೊಳ್ಳಬೇಕಿತ್ತು. ಇಂದು ಬಂದರೆ ಮತ್ತೆ ಬರುವುದು ಯಾವಾಗಲೋ. ಒಬ್ಬೊಬ್ಬರು ಒಂದೊಂದು ಸಾಲು ಎಂದು ತೀರ್ಮಾನ ಮಾಡಿಕೊಂಡು ಹಾಗೆ ಎಲ್ಲರೂ ಬರೆದ ಸಾಲುಗಳನ್ನು ಸಂಯೋಜಿಸಿ ಸಿದ್ಧ ಮಾಡಿಕೊಳ್ಳುತ್ತಿದ್ದೆವು. ಅಲ್ಲಿ ರಾಗ ಸಂಯೋಜನೆಯಾದರೆ ಇಲ್ಲಿ ಸಾಲು ಸಂಯೋಜನೆ. ಆದರೂ ಮಧ್ಯೆ ಒಂದೆರಡು ಪದ ಬಿಟ್ಟು ಹೋಗಿರುತ್ತಿತ್ತು. ಅದನ್ನು ಸರಿ ಮಾಡಿಕೊಳ್ಳಲು ಮತ್ತೆ ಕಾಯುವುದು. ಹೀಗೆ ಒಂದು ಹಾಡು ಸಿದ್ಧಗೊಳ್ಳಲು ತಿಂಗಳೇ ಹಿಡಿಯುತ್ತಿತ್ತು. ಆಗ ಸಿನಿಮಾ ರಿಲೀಸ್ ಆದಾಗ ಅದರ ಹಾಡಿನ ನಾಕು ಹಾಳೆಗಳಿಗೆ ಪಿನ್ ಹಾಕಿ ಪುಸ್ತಕದಂತೆ ಮಾರುತ್ತಿದ್ದರು. ಬಿಟ್ಟರೆ ಆಯ್ದ ಚಿತ್ರಗೀತೆಗಳ ಸಂಗ್ರಹವನ್ನು ಥಿಯೇಟರ್ ಬಳಿ ಇಲ್ಲವೇ ಫುಟ್‌ಪಾತ್‌ನಲ್ಲಿ ಮಾರುತ್ತಿದ್ದರು. ಆದರೆ ಇದಕ್ಕಾಗಿ ನಾವು ಪಟ್ಟಣಗಳಿಗೆ ಹೋಗಬೇಕಿತ್ತು. ಅದು ಸಾಧ್ಯವಾಗುತ್ತಿರಲಿಲ್ಲ. ಹಾಡಿನ ಧಾಟಿ ನಮಗೆ ಬಹಳ ಮುಖ್ಯವಾಗಿತ್ತಾಗಿ ಗೊತ್ತಿಲ್ಲದ ಪದಗಳ ಜಾಗದಲ್ಲಿ ನಮ್ಮದೇ ಪದ ಸೇರಿಸಿ ಅದೊಂಥರ ವಿಚಿತ್ರ ಸಂಯೋಜನೆಯೂ